ಕರ್ನಾಟಕ ವಿಧಾನಸಭೆ

ಸೋಮವಾರ 1 ನೇ ಮಾರ್ಚ್ 1993 ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9-50 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರಾಜ್ಯದಲ್ಲಿ ಹೊಸ ರೈಲು ಮಾರ್ಗಗಳ ಪ್ರಾರಂಭ

163 (339): ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):—

ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹೊಸದಾಗಿ ರೈಲು ಮಾರ್ಗಗಳನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರಕ್ಕೆ ತಿಳಿಸಲಾಗುವುದೆ;

ಆ) ಹಾಗಿದ್ದಲ್ಲಿ, ಆ ಮಾರ್ಗಗಳು ಯಾವುವು;

ಇ) ಬೆಂಗಳೂರು–ಮೈಸೂರು ರೈಲು ಮಾರ್ಗವು ಬೇಗನೆ ಮುಗಿಸುವಂತೆ ಸರ್ಕಾರದವರು ಕೇಂದ್ರಕ್ಕೆ ಒತ್ತಾಯ ಮಾಡಿರುವರೆ;

ಈ) ಕೊಂಕಣ ರೈಲ್ವೆ ಮಾರ್ಗಕ್ಕೆ ಇದುವರೆಗೂ ರಾಜ್ಯ ಸರ್ಕಾರದವರು ಒದಗಿಸಿರುವ ಹಣವೆಷ್ಟು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):–

ಅ) ತಿಳಿಸಲಾಗುವುದು.

ಆ) 1. ಗುಲ್ಬರ್ಗಾ–ಬೀದರ್
2. ಬೆಂಗಳೂರು – ವರ್ತೂಲ ರೈಲ್ವೆ
3. ಕೊಟ್ಟೂರು – ಹರಿಹರ ರೈಲ್ವೆ
4. ಚಾಮರಾಜನಗರ –ಸತ್ಯಮಂಗಲಂ – ಮೆಟ್ಟುಪಾಳ್ಯಂ

ಇ) ಬೆಂಗಳೂರು – ಮೈಸೂರು ರೈಲ್ವೆ ಮಾರ್ಗವು ಪೂರ್ಣಗೊಂಡಿದ್ದು ರೈಲು ಸಂಚಾರವು ನಡೆಯುತ್ತಿದೆ.

ಈ) ಈವರೆವಿಗೂ ಒಟ್ಟು ರೂ.42.50 ಕೋಟಿ ಹಣವನ್ನು ರಾಜ್ಯ ಸರ್ಕಾರವು ಕೊಂಕಣ ರೈಲ್ವೆ ಮಾರ್ಗಕ್ಕಾಗಿ ಒದಗಿಸಿರುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ:– ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ರಾಜ್ಯದಲ್ಲಿ ಹೊಸದಾಗಿ ರೈಲ್ವೆ ಮಾರ್ಗಗಳನ್ನೂ ಪ್ರಾರಂಭಿಸಲು ಕೇಂದ್ರ ಸರ್ಕಾರಕ್ಕೆ ತಿಳಿಸಲಾಗುವುದೇ ಎಂದು ಕೇಳಿರುವುದಕ್ಕೆ, ಕೇಂದ್ರ ಸರ್ಕಾರಕ್ಕೆ ತಿಳಿಸಲಾಗುವುದೆಂದು ಹೇಳಿದ್ದೀರಿ. ಇದರಲ್ಲಿ 4 ರೈಲ್ವೆ ಮಾರ್ಗಗಳನ್ನು ಸೇರಿಸಿದ್ದೀರಿ. ಇದರಲ್ಲಿ ಅತಿ ಮುಖ್ಯವಾದುದು ಬೆಂಗಳೂರು ಮತ್ತು ಮೀರಜ್. ಇದು ಸುಮಾರು ಕರ್ನಾಟಕ ರಾಜ್ಯದ 6-7 ಜಿಲ್ಲೆಗಳಿಗೆ ಅನುಕೂಲವಾಗುವಂಥದ್ದು. ಬೆಂಗಳೂರು ಮತ್ತು ಮೀರಜ್ ಇದನ್ನು ಬ್ರಾಡ್‌ಗೇಜ್ ಆಗಿ ಕನ್‌ವರ್ಟ್ ಮಾಡಲು ಇದನ್ನು ಇದರಲ್ಲಿ ಸೇರಿಸಿಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಕೆ.ಹೆಚ್. ರಂಗನಾಥ್:– ಈಗ ಬೆಂಗಳೂರು–ತುಮಕೂರು ಬ್ರಾಡ್‌ಗೇಜ್ ಕೆಲಸ ನಡೆಯುತ್ತಿದೆ. ಮೀರಜ್ ಎಂದರೆ ವಯಾ ತುಮಕೂರು, ಅರಸೀಕೆರೆಗೆ ಹಾಗೆಯೇ ಹೋಗುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ:– ನಾಲ್ಕು ರೈಲ್ವೆ ಮಾರ್ಗಗಳನ್ನು ಏನು ತೋರಿಸಿದ್ದೀರಿ, ಆದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಬರೆದಿದ್ದೀರಾ ? ಅಥವಾ ಬರೆಯಬೇಕೇ ?

ಶ್ರೀ ಕೆ.ಹೆಚ್. ರಂಗನಾಥ್:– ಬರೆದಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಕಳೆದ ವಾರ ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರು ವರ್ತುಲ ರೈಲ್ವೆಯನ್ನು ಏಪ್ರಿಲ್ 1993ರಿಂದ ಪ್ರಾರಂಭಿಸುತ್ತೇವೆಂದು ಪತ್ರಿಕೆಗಳಲ್ಲಿ ಹೇಳಿದ್ದಾರೆ. ಆದು ಲೋಕೋಪಯೋಗಿ ಮಂತ್ರಿಗಳ ಗಮನಕ್ಕೆ ಬಂದಿದೆಯೆ ? ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಿದ್ದೀರಾ ? ಕೇಂದ್ರ ಸರ್ಕಾರದವರು ಇದಕ್ಕೆ ದುಡ್ಡು ಕೊಡುತ್ತಿದ್ದಾರೆಯೆ ? ರಾಜ್ಯ ಸರ್ಕಾರದಿಂದ ಎಷ್ಟು ದುಡ್ಡು ಈ ವರ್ಷದ ಬಜೆಟ್ಟಿನಲ್ಲಿ ಇಟ್ಟುಕೊಂಡಿದ್ದೀರಿ ? ಅಥವಾ ಕೇವಲ ರಾಜಕೀಯ ಪ್ರಚಾರಕ್ಕೋಸ್ಕರ ಘೋಷಣೆ ಮಾಡಿದ್ದೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಕೆ.ಹೆಚ್. ರಂಗನಾಥ್:– ರಾಜಕೀಯ ಪ್ರಚಾರ ಅಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಮುಖ್ಯಮುಂತ್ರಿಗಳು ಪ್ರಸ್ತಾಪ ಮಾಡಿದ ಆ ಸಮಾರಂಭದಲ್ಲಿ ಕೇಂದ್ರದ ರೈಲ್ವೆ ಮಂತ್ರಿಗಳು ಕೂಡ ಇದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಾನು ಖಚಿತವಾಗಿ ಪ್ರಶ್ನೆ ಕೇಳಿದ್ದೇನೆ. 1993–94ನೇ ಇಸವಿಯ ಹಣಕಾಸಿನ ವರ್ಷ ಏಪ್ರಿಲ್ ಒಂದರಿಂದ ಪ್ರಾರಂಭವಾಗುತ್ತದೆ, ಅಂದರೆ ಇನ್ನು 31 ದಿವಸ ಇದೆ. ಈಗ ಆಯವ್ಯಯ ನಮ್ಮ ಮುಂದೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಹತ್ತು ಪರ್ಸೆಂಟ್ ಹಣವನ್ನು ಬಜೆಟ್ಟಿನಲ್ಲಿ ಇಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಬಜೆಟ್ಟಿನಲ್ಲಿ ಹಣ ಇಟ್ಟಿಲ್ಲ. ತಾವು ಸಂಬಂಧಪಟ್ಟ ಮಂತ್ರಿಗಳು ಇದ್ದೀರಿ. ಆದ್ದರಿಂದ ತಮ್ಮಲ್ಲಿ ವಿನಂತಿಸುವುದು ಏನೆಂದರೆ ರೀ–ಅಪ್ರೊಪ್ರಿಯೇಷನ್‌ನಲ್ಲಿ ಹತ್ತು ಪರ್ಸೆಂಟ್ ದುಡ್ಡು ಇಡುವವರಿದ್ದೀರಾ ? ಏತಕ್ಕೆ ಕೇಳಿದೆ ಎಂದರೆ, ಮುಖ್ಯಮಂತ್ರಿಗಳು ಹೋದ ಕಡೆಗಳೆಲ್ಲೆಲ್ಲ ಆದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆಂದು ಘೋಷಣೆ ಮಾಡುತ್ತಿದ್ದಾರೆ. ಬರೀ ಘೋಷಣೆಯಲ್ಲೇ ಸರ್ಕಾರ ಕುಳಿತಿದೆ. ಇದನ್ನು ಕೇವಲ ರಾಜಕೀಯ ಉದ್ದೇಶಕ್ಕೋಸ್ಕರ ಮಾಡಿದಿರಾ ?ಅಥವಾ ಇನ್ನು ಯಾರನ್ನಾದರೂ ಪ್ಲೀಜ್ ಮಾಡುವುದಕ್ಕೆ ಮಾಡಿದಿರಾ ? ವರ್ತುಲ ರೈಲ್ವೆ ಮಾಡಬೇಕಾದರೆ ಒಂದೆರಡು ಕೋಟಿ ರೂಪಾಯಿಗಳನ್ನಾದರೂ ಇಟ್ಟುಕೊಂಡಿದ್ದೀರಾ ?

ಶ್ರೀ ಕೆ.ಹೆಚ್.ರಂಗನಾಥ್:– ಆದಕ್ಕೆ ಹೇಳಿದೆ ಘೋಷಣೆಗೋಸ್ಕರ ಅಲ್ಲ ಎಂದು. ಕೇಂದ್ರದ ರೈಲ್ವೆ ಮಂತ್ರಿಗಳು ಇದ್ದಾಗ ರಾಜ್ಯದ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ವಿಷದವಾದ ಪ್ರಸ್ತಾಪವನ್ನು ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಮಾಡಬಹುದು.

ಶ್ರೀ ಎಂ.ವಿ. ವೆಂಕಟಪ್ಪ:– ಬೆಂಗಳೂರು ನಗರದಲ್ಲಿ ವರ್ತುಲ ರೈಲ್ವೆ ಇದೆಯಲ್ಲ ಆದಕ್ಕೆ ಎಷ್ಟು ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೀರಿ ?

ಶ್ರೀ ಕೆ.ಹೆಚ್. ರಂಗನಾಥ್:– ಈಗ ಆ ವಿವರಗಳು ನನ್ನ ಹತ್ತಿರ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ಪ್ರಶ್ನೆ ಸಂಖ್ಯೆ 1213-ತುಮಕೂರು ಜಿಲ್ಲೆಯ ಹಿತದೃಷ್ಟಿಯಿಂದ ಬಹಳ ಪ್ರಾಮುಖ್ಯವಾದ ಪ್ರಶ್ನೆಯಾಗಿದೆ.

ಶ್ರೀ ಆರ್.ಬಿ. ಚೌಧುರಿ:– ಪ್ರಶ್ನೆ 167(492) ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿಗೆ ವರ್ಗಾಯಿಸಲ್ಪಟ್ಟಿದೆ.

ಶ್ರೀ ಆಂಜನಾಮೂರ್ತಿ:– ನನಗೆ ಉತ್ತರ ಕಳುಹಿಸಿದ್ದಾರೆ. ಒಂದೆರಡು ಕ್ಲಾರಿಫಿಕೇಷನ್ ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ನನಗೆ ಸ್ವಲ್ಪ ಸಮಯ ಕೊಟ್ಟರೆ ನಾನು ಇದಕ್ಕೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು:– ಆ ಪ್ರಶ್ನೆಯನ್ನು ನೀರಾವರಿ ಇಲಾಖೆಗೆ ವರ್ಗಾಯಿಸಿರುವುದರಿಂದ ಅದನ್ನು ತಡೆಹಿಡಿದಿರುತ್ತೇನೆ.

ಹೇಮಾವತಿ ನಾಲಾ ವಲಯ ತುಮಕೂರು ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಹಾಯಕ ಇಂಜಿನಿಯರುಗಳ ಮತ್ತು ಕಿರಿಯ ಇಂಜಿನಿಯರುಗಳ ಬಗ್ಗೆ.

168 (167): ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):—

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕಳೆದ ಐದು ವರ್ಷಗಳಿಂದ ಹೇಮಾವತಿ ನಾಲಾ ವಲಯ, ತುಮಕೂರು ವ್ಯಾಪ್ತಿಯಲ್ಲಿ ಎಷ್ಟು ಮಂದಿ ಸಹಾಯಕ ಇಂಜಿನಿಯರ್ ಮತ್ತು ಎಷ್ಟು ಮಂದಿ ಕಿರಿಯ ಇಂಜಿನಿಯರ್‌ಗಳು ಸೇವೆ ಸಲ್ಲಿಸುತ್ತಿದ್ದಾರೆ;

ಆ) ಐದು, ಆರು ವರ್ಷಗಳಿಂದ ಅಲ್ಲಿಯೇ ಸೇವೆ ಮಾಡುತ್ತಿರುವ ಕಾರಣ ಏನು;

ಇ) ವರ್ಗಾವಣೆ ಆಧಾರದ ಮೇಲೆ ಎಷ್ಟು ವರ್ಷದಿಂದ ಎಷ್ಟು ಮಂದಿ ಕೆಲಸ ನಿರ್ವಹಿಸುತ್ತಿದ್ದಾರೆ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) 1. ಸಹಾಯಕ ಇಂಜಿನಿಯರುಗಳು 48 ಮಂದಿ
2. ಕಿರಿಯ ಇಂಜಿನಿಯರುಗಳು 29 ಮಂದಿ.

ಆ) ಮೇಲಿನ ನೌಕರರು ವಲಯದಿಂದ ಹೊರಗೆ ವರ್ಗವಾಗದಿದ್ದ ಕಾರಣ ಈ ವಲಯದಲ್ಲಿಯೇ ಮುಂದುವರಿಯುತ್ತಿದ್ದಾರೆ.

ಇ) 16 ಸಹಾಯಕ ಇಂಜಿನಿಯರುಗಳ, 8 ಕಿರಿಯ ಇಂಜಿನಿಯರುಗಳು ಒಂದು ಮತ್ತು ಎರಡು ವರ್ಷಗಳಿಗೂ ಮೇಲ್ಪಟ್ಟು ಕೆಲಸ ನಿರ್ವಹಿಸುತ್ತಿದ್ದಾರೆ.

ಶ್ರೀ ಕೆ. ಲಕ್ಕಣ್ಣ:– ಹೇಮಾವತಿ ಯೋಜನೆ, ತುಮಕೂರು ಭಾಗದಲ್ಲಿ ಅಸಿಸ್ಟೆಂಟ್ ಇಂಜಿನಿಯರ್‌ಗಳು ಮತ್ತು ಜೂನಿಯರ್ ಇಂಜಿನಿಯರ್‌ಗಳು ಸುಮಾರು 10-12ವರ್ಷಗಳಿಂದ ಸೇವೆ ಮಾಡುತ್ತಿದ್ದಾರೆ. ಅವರು ಪರಸ್ಪರ ವರ್ಗಾವಣೆ ಅಲ್ಲಿಯೇ ಮಾಡಿಕೊಂಡು ಇದುವರೆಗೂ ಬೇರೆ ಕಡೆ ವರ್ಗಾವಣೆಯಾಗಿಲ್ಲ. ಏತಕ್ಕೋಸ್ಕರ ವರ್ಗಾವಣೆ ಮಾಡಿಲ್ಲವೆಂದು ನೀರಾವರಿ ಸಚಿವರನ್ನು ಕೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:– ಈ ವಲಯದಲ್ಲಿ ಎರಡು ವೃತ್ತ ಕಛೇರಿಗಳಿವೆ, 8 ವಿಭಾಗ ಕಛೇರಿಗಳಿವೆ, 32 ಉಪವಿಭಾಗ ಕಛೇರಿಗಳಿವೆ; ಡಿಸೆಂಬರ್ 1992ರಿಂದೀಚೆಗೆ ಎರಡು ಹೇಮಾವತಿ ನಾಲಾ ವಿತರಣಾ ವಿಭಾಗ ಕಛೇರಿಗಳು ಮತ್ತು 7 ಉಪ ವಿಭಾಗ ಕಛೇರಿಗಳು ಸೃಷ್ಟಿಯಾಗಿವೆ. ಐದು ವರ್ಷಕ್ಕೆ ಮೇಲ್ಪಟ್ಟು 48 ಸಹಾಯಕ ಇಂಜಿನಿಯರ್‌ಗಳು 29 ಕಿರಿಯ ಇಂಜಿನಿಯರ್‌ಗಳು ಕೆಲಸ ನಿರ್ವಹಿಸುತ್ತಿದ್ದಾರೆ. ಇವರು ಹೊರಗೆ ವರ್ಗಾವಣೆ ಹೊಂದಿರದ ಪ್ರಯುಕ್ತ ಈ ವಲಯದಲ್ಲಿಯೇ ಒಂದು ಸ್ಥಳದಿಂದ ಇನ್ನೊಂದು